**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ಹಾವೇರಿ.**

**ಸಿ.ಸಿ. ನಂ. 1104/2023**

ಡಿ.ಡಬ್ಲ್ಯೂ- 1

| | |
|---|---|
| ಹೆಸರು | : ಶಿವಶಂಕ್ರಪ್ಪ ಬಾರ್ಕಿ |
| ತಂದೆಯ ಹೆಸರು | ಃ ನಿಂಗಪ್ಪ |
| ವಯಸ್ಸು | : 49 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸಸ್ಥಳ | : ಸಾಃ ಕಳ್ಳಿಹಾಳ, ತಾಃ ಬ್ಯಾಡಗಿ. |

**ದಿನಾಂಕಃ 31-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎಸ್.ಪಿ.ಎಸ್., ಆರೋಪಿ ಪರ ವಕೀಲರಿಂದಃ**

**1.** 2016-2017 ರಲ್ಲಿ ನನ್ನ ಮತ್ತು ಫಿರ್ಯಾದುದಾರರ ನಡುವೆ ಕರಾರು ಪತ್ರದ ವ್ಯವಹಾರವಾಗಿದ್ದು, ಅಲ್ಲಿ ನನ್ನ ಮತ್ತು ಫಿರ್ಯಾದಿ ನಡುವೆ ಸರ್ವೆ ನಂಬರ 77/3, 16/1, ಹೊಸಳ್ಳಿ ಗ್ರಾಮದ ಜಮೀನಿಗೆ ಸಂಬಂಧಿಸಿದಂತೆ ವ್ಯವಹಾರವಾಗಿದ್ದು, ಆ ಜಮೀನಿನ ಖರೀದಿ ಒಪ್ಪಂದಕ್ಕೆ ರೂ. 3.00 ಲಕ್ಷಕ್ಕೆ ಸಂಬಂಧಿಸಿದಂತೆ ಲೋನ ಮಾಡಿಸಿದ್ದು, ಆ ಹಣವನ್ನು ನೀಡುವಾಗ ಸಾಕ್ಷಿದಾರರ ಸಮಕ್ಷಮ ಭದ್ರತೆಗೆ ಅಂತಾ ಹೇಳಿ 03 ಖಾಲಿ ಚೆಕ್‌ಗೆ ನನ್ನ ಸಹಿ ಹಾಕಿಸಿಕೊಂಡು ನನ್ನಿಂದ ಪಡೆದುಕೊಂಡಿರುತ್ತಾರೆ.

**2.** ಆ ವ್ಯವಹಾರಕ್ಕೆ ಸಂಬಂಧಿಸಿದಂತೆ ರಾಜಿಸಂಧಾನಕ್ಕೆ ಸಂಬಂಧಿಸಿದಂತೆ ಮಾತನಾಡಿದ್ದು ಆದರಲ್ಲಿ ಹಣದ ತಿರುವಳಿಗಾಗಿ ರೂ. 1.00 ಲಕ್ಷ ಬಡ್ಡಿ ಹಣವನ್ನು ಬಿಡುವಂತೆ ಹೇಳಿ ಬಿಡಿಸಿದ್ದು, ಹಣ ನೀಡಿದ ನಂತರ ಚೆಕ್‌ನ್ನು ಕೊಡುತ್ತೇನೆ ಅಂತಾ ಹೇಳಿ, ಚೆಕ್‌ನ್ನು ಕೊಟ್ಟಿರುವುದಿಲ್ಲ. ಆದರೆ ಆ ಚೆಕ್‌ನ್ನು ವಾಪಸ್ಸ ನೀಡದೇ ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಪ್ರಕರಣ ದಾಖಲು ಮಾಡಿರುತ್ತಾರೆ. ರಾಜಿ ಸಂಧಾನದಲ್ಲಿ ಮಾತನಾಡುವಾಗ ಸಾಕ್ಷಿದಾರರಾದ ರಾಜು

ಪಂಪಣ್ಣನವರ, ಶಿವಣ್ಣ ಹರ್ತಿ ಅಂತಾ ಇರುತ್ತಾರೆ ಅವರ ಸಾಕ್ಷಿ ವಿಚಾರಣೆ ಮಾಡಿಸುತ್ತೇನೆ.

ನಾನು ವ್ಯವಹಾರಿಕವಾಗಿ ಕೊಟ್ಟಂತಹ ಚೆಕ್‌ನ್ನು ಫಿರ್ಯಾದಿದಾರರು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ, ಆದ್ದರಿಂದ ನನಗೆ ನ್ಯಾಯ ಒದಗಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-ಸಹಿ- **31-8-2024**
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.